UASB Library
Newspaper Clippings
Tuesday 08-03-2022 Pg .1
Jai Kisan

Pending irrigation bills in state touch Rs 10K-crore mark

Mismatch between fund allocation, project cost: Minister

BENGALURU, DHNS

The pile-up of pending bills in the Water Resources Department has now touched Rs 10,000 crore.

This comes at a time when the cost of completing ongoing works of the department itself would come to Rs 1 lakh crore, according to Water Resources Minister Govind Karjol.

The data, tabled by the minister in the Legislative Council, also showed that the pending dues of the department to contractors swelled by Rs 6,200 crore in just three years - from Rs 3,789 crore in 2018-19 to Rs 9,998.95 crore in 2021-22.

Responding to a calling attention motion by JD(S) MLC B M Farooq in the Legislative Council on Monday, the minister said that the problem faced by the department was due to a mismatch between allocation of funds and the cost of projects being taken up.

One of the main concerns, according to the minister, was the allocation of token amount for a project after which local elected representatives lobbied to ensure that a tender is invited for the same. "If we approve projects based on budget, then this would not be an issue," he said.

Among the various corporations under the department, the highest pendency of bills is in Karnataka Neeravari Nigama Limited with dues totalling to Rs 4,058.32 crore, followed by Visveswaraya Jala Nigama Limited (Rs 3,273.07 crore), Cauvery Neeravari Nigama Limited (Rs 1,355.16 crore) and Krishna Bhagya Jal Nigama Limited (Rs 1,213.4 crore).

Karjol also shared details on the year-on-year increase in pending bills to contractors, which grew from Rs 719 crore in 2013-14 to Rs 9,998.95 crore in 2021-22.

Though the dues had touched Rs 8,887 crore in 2016-17, bills were cleared in 2017-18 fiscal bringing down the pending bill amount to Rs 1,955 crore. It rose to Rs 3,789 cr in 2018-19, Rs 7,533 cr in 2019-20 and Rs 7,092 cr in 2020-21, the minister said.

He noted that there is enough water availability in the state to irrigate an additional 50 lakh acres of land. "Though water is available, we have a shortage of funds," he said.

Pending dues

Year	Amount (in Rs cr)
2013-14	719
2014-15	796
2015-16	1,231
2016-17	8,887
2017-18	1,955
2018-19	3,789
2019-20	7,533
2020-21	7,092
2021-22	9,998.95



08-03-2022
Dec Hrd Pg 05

ಸಮರದಿಂದ ಜಾಗತಿಕ ಆಹಾರ ಬಿಕ್ಕಟ್ಟು?

ಲಂಡನ್: ಉಕ್ರೇನ್ ಸಮರವು ಜಾಗತಿಕ ಆಹಾರ ಪೂರೈಕೆ ಮತ್ತು ವೆಚ್ಚದ ಮೇಲೆ ದೊಡ್ಡ ಪರಿಣಾಮ ಬೀರಲಿದೆ ಎಂಬುದಾಗಿ ವಿಶ್ವದ ಅತಿದೊಡ್ಡ ರಸಗೊಬ್ಬರ ಕಾರ್ಖಾನೆಯೊಂದರ ಮುಖ್ಯಸ್ಥರು ಎಚ್ಚರಿಸಿದ್ದಾರೆ.

ಸುಮಾರು 60ಕ್ಕೂ ಅಧಿಕ ದೇಶಗಳಲ್ಲಿ ಕಾರ್ಯಾಚರಿಸುತ್ತಿರುವ ಯಾರಾ ಇಂಟರ್‌ನ್ಯಾಷನಲ್ ಎಂಬ ರಸಗೊಬ್ಬರ ಕಂಪೆನಿಯು ರಷ್ಯಾದಿಂದ ಭಾರೀ ಪ್ರಮಾಣದ ಕಚ್ಚಾ ವಸ್ತುಗಳನ್ನು ಖರೀದಿಸುವ ಕಂಪೆನಿಯಾಗಿದೆ.. ರಸಗೊಬ್ಬರ ಬೆಲೆಯು ಈಗಾಗಲೆ ಜಾಗತಿಕವಾಗಿ ಏರುಮುಖ ಕಂಡಿದೆ. ಪರಿಸ್ಥಿತಿ ಇನ್ನಷ್ಟು ಹದಗೆಡಬಹುದು ಎಂದು ನಾರ್ವೆ ಮೂಲದ ಯಾರಾ ಕಂಪೆನಿಯ ಮುಖ್ಯಸ್ಥ ಸವೆನ್ ಟೋರ್ ಹೋಲ್ಸ್‌ತರ್ ಹೇಳಿದ್ದಾರೆ. ಅಲ್ಲದೆ, ಯುದ್ಧಕ್ಕೆ ಮೊದಲೇ ನಾವು ಕಠಿಣ ಪರಿಸ್ಥಿತಿಯಲ್ಲಿದ್ದೆವು. ಈಗ ನಮ್ಮ ಕಚ್ಚಾ ವಸ್ತುಗಳ ಪೂರೈಕೆಗೂ ಅಡ್ಡಿಯುಂಟಾಗಿದೆ. ಇದು ಜಾಗತಿಕವಾಗಿ ಪ್ರತಿಕೂಲ ಪರಿಣಾಮ ಬೀರಬಹುದು ಎಂದಿದ್ದಾರೆ..

ರಷ್ಯಾ ಮತ್ತು ಉಕ್ರೇನ್‌ಗಳಲ್ಲಿ ಕೃಷಿ ಉತ್ಪನ್ನ ಮತ್ತು ಫಲೋತ್ಪನ್ನಗಳು ಭಾರೀ ಪ್ರಮಾಣದಲ್ಲಿ ಉತ್ಪಾದನೆಯಾಗುತ್ತವೆ.

ರಸಗೊಬ್ಬರಗಳಿಗೆ ಬೇಕಾದ ಪೊಟಾಶ್ ಮತ್ತು ಫಾಸ್ಪೇಟ್‌ಗಳು ರಷ್ಯಾದಲ್ಲಿ ಅಧಿಕವಾಗಿ ಉತ್ಪಾದನೆಯಾಗುತ್ತವೆ. ಆದರೀಗ ಅವುಗಳ ಪೂರೈಕೆ ಸ್ಥಗಿತಗೊಂಡಿದೆ. ರಸಗೊಬ್ಬರ ಕೊರತೆಯುಂಟಾದರೆ ಆಹಾರೋತ್ಪಾದನೆಯು ಶೇ. 50ರಷ್ಟು ಕಡಿತವಾಗಲಿದೆ. ಕೀವ್‌ನಲ್ಲಿರುವ ಅವರ ಕಂಪೆನಿಯು ರಷ್ಯಾದ ಕ್ಷಿಪಣಿ ದಾಳಿಗೂ ತುತ್ತಾಗಿದೆ. ಇದೇವೇಳೆ, ರಷ್ಯಾವು ತನ್ನ ದೇಶದ ರಸಗೊಬ್ಬರ ಕಾರ್ಖಾನೆಗಳು ರಫ್ತು ನಿಲ್ಲಿಸುವಂತೆ ಪುಟಿನ್ ಆದೇಶಿಸಿದ್ದಾರೆ.



ವಿಶ್ವಕ್ಕೆ ಭಾರತದ ಗೋಧಿ

ವಿಶ್ವಕ್ಕೆ ಗೋಧಿ ಪೂರೈಕೆಯಲ್ಲೂ ವ್ಯತ್ಯಯವಾಗಲಿದೆ. ಉಕ್ರೇನ್ ಮತ್ತು ರಷ್ಯಾಗಳು ಜಾಗತಿಕವಾಗಿ ಶೇ.30ರಷ್ಟು ಗೋಧಿಪೂರೈಸುವ ದೇಶಗಳಾಗಿದ್ದು ಯುದ್ಧದಿಂದಾಗಿ ಅದು ಸ್ಥಗಿತಗೊಂಡಿದೆ. ಆದರೆ ಇದೀಗ ವಿಶ್ವಕ್ಕೆ ಭಾರತವು ಆಪದ್ಬಾಂಧವನಾಗಿ ಬಂದಿದೆ. ಭಾರತದಲ್ಲಿ ಈ ಬಾರಿ ದಾಖಲೆ ಪ್ರಮಾಣದಲ್ಲಿ ಗೋಧಿ ಉತ್ಪಾದನೆಯಾಗಿದ್ದು ಭಾರತದ ರಫ್ತು ಪ್ರಮಾಣವು ಹೆಚ್ಚ ತೊಡಗಿದೆ. ವಿವಿಧ ದೇಶಗಳಿಗೆ ಭಾರತವು ಗೋಧಿ ರಫ್ತು ಹೆಚ್ಚಿಸಿದೆ.

08-03-2022
Hd Pg 05

For more information visit
University Library Website
Web - uasbagrilibindia.org
E-mail- librarian@uasbangalore.edu.in

"Happy International Women's Day"

ಬ್ಲೂಟೂತ್: ಡೇರಿ ಉದ್ಯಮದ ಹೊಸ ಆವಿಷ್ಕಾರ

ಇಗತ್ತು ಬದಲಾಗುತ್ತಿದೆ ಎನ್ನುವುದಕ್ಕೆ ವಿದೇಶಗಳಲ್ಲಿ ಬದಲಾಗುತ್ತಿರುವ ಡೇರಿ ಉದ್ಯಮವೇ ಸಾಕ್ಷಿ. ಒಂದರ್ಥದಲ್ಲಿ ಇತ್ತೀಚಿನ ದಿನಗಳಲ್ಲಿ ಹೊಸ ಹೊಸ ತಂತ್ರಜ್ಞಾನಗಳು ಡೇರಿ ಉದ್ಯಮದ ರೂಪವನ್ನೇ ಬದಲಾಯಿಸಿಬಿಟ್ಟಿವೆ. ಹೀಗಾಗಿಯೇ ವಿದೇಶಗಳಲ್ಲಿ ದಿನದಿಂದ ದಿನಕ್ಕೆ ಡೇರಿ ಉದ್ಯಮದಲ್ಲಿ ಹೊಸ ಹೊಸ ಬದಲಾವಣೆಗಳನ್ನು ಕಾಣಲು ಸಾಧ್ಯವಾಗುತ್ತಿದೆ. ಎಷ್ಟರಮಟ್ಟಿಗೆ ಎಂದರೆ ಪ್ರತಿ ಎರಡರಿಂದ ಮೂರು ವರ್ಷಗಳಲ್ಲಿ ಕಲ್ಪನೆಗೂ ಮೀರಿದ ತಂತ್ರಜ್ಞಾನಗಳು ಡೇರಿ ಉದ್ಯಮವನ್ನು ಆವರಿಸಿಕೊಳ್ಳುತ್ತಾ, ಆಯಾ ದೇಶಗಳ ಆದಾಯದ ಪ್ರಮುಖ ಮೂಲವಾಗಿ ಡೇರಿ ಉದ್ಯಮವಿಂದು ಹೊರಹೊಮ್ಮುತ್ತಿದೆ.

ಇತ್ತೀಚಿನ ದಿನಗಳಲ್ಲಿ ಯುವ ಸಮೂಹ ಡೇರಿ ಉದ್ಯಮದತ್ತ ಆಕರ್ಷಿತರಾಗುತ್ತಿರುವ ಕಾರಣ ವಿಶ್ವದ ಡೇರಿ ಉದ್ಯಮದಲ್ಲಿ ಹೊಸ ಹೊಸ ಆವಿಷ್ಕಾರಗಳೇ ನಡೆಯುತ್ತಿದೆ. ಎರಡು ದಶಕಗಳ ಹಿಂದಿನ ತಂತ್ರಜ್ಞಾನಗಳೆಲ್ಲಾ ಓಬಿರಾಯನ ಕಾಲದ್ದು ಎನ್ನುವಷ್ಟರ ಮಟ್ಟಿಗೆ ಹೊಸ ಗಾಳಿ ಬೀಸುತ್ತಿದೆ. ಎಷ್ಟರ ಮಟ್ಟಿಗೆ ಎಂದರೆ ಡೇರಿ ಉದ್ಯಮದಲ್ಲಾಗುವ ಬದಲಾವಣೆ ಷೇರು ಮಾರುಕಟ್ಟೆಯ ಮೇಲೆ ಗಂಭೀರ ಪರಿಣಾಮ ಬೀರುವಷ್ಟರ ಮಟ್ಟಿಗೆ ಡೇರಿ ಉದ್ಯಮ ಬೆಳೆದು ನಿಂತಿದೆ. ಹೀಗಾಗಿ ಇಂದು ಈ ಕ್ಷೇತ್ರದಲ್ಲಿ ಘಟಾನುಘಟಿ ಕಂಪನಿಗಳೆಲ್ಲಾ ತಮ್ಮ ಬಂಡವಾಳವನ್ನು ಹೂಡಲು ಪ್ರಾರಂಭಿಸಿವೆ. ಸಹಜವಾಗಿ ಇದರಿಂದ ಹೊಸ ಹೊಸ ತಂತ್ರಜ್ಞಾನಗಳು ಕಾಣಿಸಿಕೊಳ್ಳುವಂತಾಗಿದೆ. ಹೀಗೆ ಕಾಣಿಸಿಕೊಂಡ ತಂತ್ರಜ್ಞಾನಗಳು ಡೇರಿ ಉದ್ಯಮದಲ್ಲಿ ಸಂಚಲನವನ್ನೇ ಮೂಡಿಸಿಬಿಟ್ಟಿವೆ. ಹೀಗೆ ಬಂದಂತ ಹೊಸ ತಂತ್ರಜ್ಞಾನಗಳಲ್ಲಿ ಪ್ರಮುಖವಾದುದೇ ಬ್ಲೂಟೂತ್ ತಂತ್ರಜ್ಞಾನ.

ಡೇರಿ ಫಾರ್ಮ್‌ನಲ್ಲಿರುವ ಎಲ್ಲಾ ಹಸುಗಳ ಚಲನವಲನ ಸೇರಿದಂತೆ ಅದರ ಪ್ರತಿ ದಿನದ ಸಂಪೂರ್ಣ ಚಟುವಟಿಕೆಯನ್ನು ಗಮನಿಸಲೆಂದು ಅವುಗಳ ಒಂದು ಕಿವಿಗೆ ನೀಲಿ ಇಲ್ಲವೇ ಹಸಿರು ಬಣ್ಣದ ಓಲೆಯಂತಹ ವಸ್ತುವೊಂದನ್ನು ಹಾಕಲಾಗುತ್ತದೆ. ಇನ್ನು ಕೆಲವೊಂದು ಕಡೆ ಹಸುಗಳ ಕುತ್ತಿಗೆಗೆ ಬೆಲ್ಟ್‌ನಂತಹ ವಸ್ತುವೊಂದನ್ನು ಹಾಕಲಾಗುತ್ತದೆ. ಹೀಗೆ ಹಸುಗಳ ದಿನನಿತ್ಯದ ಚಟುವಟಿಕೆಯನ್ನು ಗಮನದಲ್ಲಿಡಲು ಹಾಕಲಾಗುವ ಈ ವಸ್ತುಗಳನ್ನೇ ಆಧುನಿಕ ಯುಗದಲ್ಲಿ ಬ್ಲೂಟೂತ್ ಎಂದು ಹೇಳಲಾಗುತ್ತದೆ. ಹೀಗೆ ಹಾಕಲಾದ ಬ್ಲೂಟೂತ್‌ನಿಂದ ಆ ಹಸುವಿನ ವಯಸ್ಸು, ಹುಟ್ಟಿನ ನಿಖರ ವಿವರ, ಪ್ರತಿ ನಿತ್ಯ ಸೇವಿಸುವ ಆಹಾರದ ಪ್ರಮಾಣ, ನೀಡಿದ ಮತ್ತು ನೀಡಬೇಕಾದ ಔಷಧಗಳ ಸಂಪೂರ್ಣ ವಿವರ, ಅದರ ಆರೋಗ್ಯದಲ್ಲಾಗುವ ಬದಲಾವಣೆ ಸೇರಿದಂತೆ ಅದು ನೀಡುವ ಹಾಲಿನ ಪ್ರಮಾಣದ ಕುರಿತಾದ ಸಂಪೂರ್ಣ ವಿವರ ಕ್ಷಣಾರ್ಧದಲ್ಲಿ ಈ ತಂತ್ರಜ್ಞಾನದಿಂದ ಪಡೆಯಬಹುದಾಗಿದೆ.

ವಿದೇಶಗಳಲ್ಲಿ ಇಂದು ಈ ತಂತ್ರಜ್ಞಾನವನ್ನು ಎಲ್ಲಾ ಡೇರಿ ಉದ್ಯಮದಾರರು ತಮ್ಮ ಡೇರಿ ಫಾರ್ಮ್‌ನಲ್ಲಿರುವ ಪ್ರತಿಯೊಂದು ಹಸುವಿನಿಂದ ಪ್ರತ್ಯೇಕವಾಗಿ ಸಿಗುವ ಹಾಲಿನ ಇಳುವರಿಯ ಕುರಿತಂತೆ ನಿಗಾ ವಹಿಸುವ ಉದ್ದೇಶದಿಂದಲೇ ಪ್ರಮುಖವಾಗಿ ಅಳವಡಿಸಿಕೊಳ್ಳುತ್ತಿದ್ದಾರೆ. ಹೀಗೆ ಪ್ರತಿಯೊಂದು ಹಸುವಿನ ಕಿವಿಗೆ ಅಳವಡಿಸಲಾದ ಈ ಬ್ಲೂಟೂತ್ ಆಯಾ ಹಸುವಿನ ಸಂಪೂರ್ಣ ವಿವರವನ್ನು ಸೆನ್ಸಾರ್ ಮೂಲಕ ಕಂಪ್ಯೂಟರ್‌ಗೆ ಕ್ಷಣ ಕ್ಷಣವೂ ರವಾನಿಸುತ್ತಿರುತ್ತದೆ. ಪ್ರತಿಯೊಂದು ಹಸು ದಿನದಲ್ಲಿ ಎರಡು ಇಲ್ಲವೇ ಮೂರು ಬಾರಿ ಹಾಲನ್ನು ಕರೆದಾಗ ನೀಡಿದ ಹಾಲಿನ ಪ್ರಮಾಣ, ಹಿಂದಿನ ದಿನ ಕರೆದ ಹಾಲಿಗೂ ಇಂದು ಕರೆದ ಹಾಲಿನ ಪ್ರಮಾಣದಲ್ಲಿ ಆಗಿರುವ ವ್ಯತ್ಯಾಸ,



ಧರಣಿ ಮಂಡಲ
ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com

ಹಾಲಿನ ಗುಣಮಟ್ಟದ ವಿವರ ಸೇರಿದಂತೆ ಅದರ ಆರೋಗ್ಯದ ಸಂಪೂರ್ಣ ಚಿತ್ರಣವನ್ನೇ ಕ್ಷಣಾರ್ಧದಲ್ಲಿ ಇದರಿಂದ ಪಡೆಯಬಹುದಾಗಿದೆ.

ವಿದೇಶದಲ್ಲೆಲ್ಲಾ ದಿನಕ್ಕೆ ಮೂರು ಬಾರಿ ಹಾಲನ್ನು ಕರೆಯುವ ವ್ಯವಸ್ಥೆ ಇದೆ. ಬೆಳಗ್ಗೆ 6 ಗಂಟೆಯ ಸುಮಾರಿಗೆ, ಮಧ್ಯಾಹ್ನ 2 ಗಂಟೆಯ ಸುಮಾರಿಗೆ ಹಾಗೂ ರಾತ್ರಿ 10 ಗಂಟೆಯ ಸುಮಾರಿಗೆ ಹಾಲನ್ನು ಕರೆಯಲಾಗುತ್ತದೆ. ಇದರೊಂದಿಗೆ ಹಾಲಿನ ಶುದ್ಧತೆಗೆ ಮೊದಲ ಆದ್ಯತೆಯನ್ನು ನೀಡಲಾಗಿರುತ್ತದೆ. ಆದರಲ್ಲೂ ಹಾಲು ಕರೆಯುವ ಸ್ಥಳದಲ್ಲಂತೂ ಸ್ವಚ್ಛತೆ ಕುರಿತಂತೆ ಹೆಚ್ಚಿನ ನಿಗಾ ವಹಿಸಲಾಗಿರುತ್ತದೆ. ಹಸುಗಳು ಎಲ್ಲೆಂದರಲ್ಲಿ ಮೇಯುವುದು ಮತ್ತು ಮಲಗುವುದರಿಂದ ಅವುಗಳ ಗೊರಸು ಮತ್ತು ಕೆಚ್ಚಲಿನಲ್ಲಿ ಸಾಕಷ್ಟು ಕೊಳಕು ತುಂಬಿರುವ ಸಾಧ್ಯತೆ ಇರುತ್ತದೆ. ಇಂತಹ ಸಂದರ್ಭದಲ್ಲಿ ಅದನ್ನು ಪತ್ತೆ ಹಚ್ಚಿ ಪ್ರತ್ಯೇಕಿಸುವುದು ಕಷ್ಟ, ಆದರೆ ಈ ತಂತ್ರಜ್ಞಾನದಲ್ಲಿ ಇದು ಅತಿ ಸುಲಭವಾದುದಾಗಿದೆ. ಹಾಲು ಕರೆಯುವ ಕೇಂದ್ರಕ್ಕೆ ತೆರಳುವ ಪ್ರತಿಯೊಂದು ಹಸುವಿನ ಕಾಲು ಮತ್ತು ಕೆಚ್ಚಲು ಮಲಿನವಾಗಿದ್ದರೆ ಸೈರನ್ ಹೊಡೆದುಕೊಳ್ಳುವ ಮೂಲಕ ಸೆನ್ಸಾರ್‌ಗೆ ಇದು ಸೂಚನೆಯನ್ನು ಕೂಡಲೇ ನೀಡುತ್ತದೆ. ಇದರಿಂದ ಆ ಹಸುವನ್ನು ಇನ್ನುಳಿದ ಹಸುಗಳಿಂದ ಪ್ರತ್ಯೇಕಿಸಲು ಸುಲಭವಾಗುತ್ತದೆ. ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಅವುಗಳ ಗೊರಸು ಟ್ರಿಮ್ ಮಾಡಬೇಕಾದುದರ ಕುರಿತಂತೆಯೂ ಮಾಹಿತಿಯನ್ನು ನೀಡುತ್ತದೆ.



ಹಸುಗಳು ಪ್ರತಿನಿತ್ಯ ಕೊಡುವ ಹಾಲಿನ ಪ್ರಮಾಣದಲ್ಲಿ ಕಡಿತ ಕಂಡುಬಂದರೆ ಕೂಡಲೇ ಸೈರನ್ ಮೂಲಕ ಅದನ್ನು ಸಂಬಂಧಪಟ್ಟ ವ್ಯವಸ್ಥೆಗೆ ಮಾಹಿತಿ ನೀಡುತ್ತದೆ. ಇದರೊಂದಿಗೆ ಕರೆದ ಹಾಲಿನಲ್ಲಿನ ಉಷ್ಣಾಂಶದಲ್ಲಿ ವ್ಯತ್ಯಾಸ ಕಂಡುಬಂದರೂ ಅದನ್ನು ಸಹ ಸೈರನ್ ಮೂಲಕ ತಿಳಿಸುತ್ತದೆ. ಹಾಗೆಯೇ ಸಾಮಾನ್ಯವಾಗಿ ಕರೆದ ಹಾಲು ಸುಮಾರು 103 ಡಿಗ್ರಿ ತಾಪಮಾನವನ್ನು ಹೊಂದಿರುತ್ತದೆ. ಇದನ್ನು ಕೇವಲ 5 ನಿಮಿಷದಲ್ಲಿ 38 ಡಿಗ್ರಿಗೆ ತರಲು ಈ ತಂತ್ರಜ್ಞಾನ ಸಹಾಯಕವಾದುದಾಗಿದೆ. ಇದರೊಂದಿಗೆ ಕರೆದ ಹಾಲು ಶೇಖರಣೆಯಾಗುವ ಟ್ಯಾಂಕ್ ತುಂಬಿದ ಕೂಡಲೇ ಆ ಕುರಿತಂತೆ ಮಾಹಿತಿಯನ್ನು ನೀಡುತ್ತದೆ.

ಸಾಮಾನ್ಯವಾಗಿ ವಿದೇಶಗಳಲ್ಲಿನ ಡೇರಿ ಫಾರ್ಮ್‌ಗಳಲ್ಲಿ ಹೆಚ್.ಎಫ್. ಮತ್ತು ಜರ್ಸಿ ತಳಿಗಳೇ ಹೆಚ್ಚಾಗಿ ಕಾಣಿಸಿಗುತ್ತವೆ. ಇವುಗಳು ಭಾರತೀಯ ಹಸುಗಳಿಗೆ ಹೋಲಿಸಿದ್ದಲ್ಲಿ ರೋಗ ನಿರೋಧಕ ಶಕ್ತಿ ಅತಿ ಕಡಿಮೆ. ಹೀಗಾಗಿ ಇವುಗಳ ಪಾಲನೆಯಲ್ಲಿ ವೈದ್ಯಕೀಯ ವೆಚ್ಚವೂ ಸಹ ಹೆಚ್ಚು, ಸಾವಿರಾರು ಹಸುಗಳು ಒಟ್ಟಿಗೆ ಇರುವಾಗ ಯಾವುದಕ್ಕೆ ಇಂಜೆಕ್ಷನ್ ಕೊಡಲಾಗಿದೆ ಮತ್ತು ಯಾವುದಕ್ಕೆ ಕೊಡಬೇಕಾಗಿದೆ ಎಂಬುದನ್ನು ಪತ್ತೆ ಹಚ್ಚುವುದು ಕಷ್ಟ, ಇದರೊಂದಿಗೆ ಯಾವ ಹಸುವಿಗೆ ಕೃತಕ ಗರ್ಭಧಾರಣೆ ಮಾಡಿಸಬೇಕು ಮತ್ತು ಯಾವ ಹಸು ಗರ್ಭ ಧರಿಸಿದೆ ಎಂಬುದನ್ನು ತಕ್ಷಣ ತಿಳಿಯುವುದು ಸಹ ಕಷ್ಟ, ಇಂತಹ ಸಂದರ್ಭದಲ್ಲಿ ಈ ತಂತ್ರಜ್ಞಾನ ನೆರವಿಗೆ ಬರುವುದಷ್ಟೇ ಅಲ್ಲದೆ ಮಾಡಬೇಕಾಗಿರುವ ಒಂದಷ್ಟು ಕೆಲಸದ ಕುರಿತು ಸೂಚನೆಯನ್ನು ಸಹ ನೀಡುತ್ತದೆ. ಇನ್ನು ಇವುಗಳಿಗೆ ಜ್ವರದಂತಹ ಸಣ್ಣ ಕಾಯಿಲೆಯಿಂದ ಹಿಡಿದು ಬ್ರೂಸಲೀಸ್, ಕ್ಯಾನ್ಸರ್‌ನಂತಹ ಮಾರಕ ಕಾಯಿಲೆಗಳು ಬರುವುದು ಅತಿ ಸಹಜ. ಜ್ವರವಂತೂ ಇವುಗಳಿಗೆ ಬರುವುದು ತಿಳಿಯುವುದೇ ಒಂದು ಸವಾಲಿನ ಕೆಲಸ. ಇಂತಹ ಸಂದರ್ಭದಲ್ಲಿ ಪ್ರತಿಯೊಂದು ಹಸುವನ್ನು ಮುಟ್ಟಿ ಪರೀಕ್ಷೆ ಮಾಡದೆ ಅವುಗಳಲ್ಲಿರುವ ಸಮಸ್ಯೆಯನ್ನು ಪತ್ತೆ ಹಚ್ಚಲು ಈ ತಂತ್ರಜ್ಞಾನ ಅತ್ಯಂತ ಸಹಕಾರಿಯಾದುದಾಗಿದೆ. ಒಂದೊಮ್ಮೆ ಹಾಲು ಕರೆಯುವ ಸಂದರ್ಭದಲ್ಲಿ ಜ್ವರ ಇರುವುದು ಕಂಡುಬಂದರೆ ಕೂಡಲೇ ವೈದ್ಯಕೀಯ ತಂಡಕ್ಕೆ ಇದು ಮಾಹಿತಿಯನ್ನು ರವಾನಿಸುತ್ತದೆ. ಹೀಗೆ ಇವುಗಳ ಮೇಲೆ ದಿನದ 24 ಗಂಟೆಯೂ ನಿಗಾ ಇಡಬೇಕಾದ ಕೆಲಸವನ್ನು ಈ ತಂತ್ರಜ್ಞಾನದಿಂದ ಪಡೆಯಬಹುದಾಗಿದೆ. ಇದರೊಂದಿಗೆ ದಿನದ 24 ಗಂಟೆಯೂ ಅದರ ದೇಹದಲ್ಲಾಗುತ್ತಿರುವ ಪ್ರತಿಯೊಂದು ಬದಲಾವಣೆಯನ್ನು ಕ್ಷಣ ಕ್ಷಣಕ್ಕೂ ಕಂಪ್ಯೂಟರ್‌ಗೆ ರವಾನಿಸುವ ಕೆಲಸವನ್ನು ಇದು ಮಾಡುವ ಮೂಲಕ ಕೂಡಲೇ ಚಿಕಿತ್ಸೆಯನ್ನು ನೀಡಲು ಸಹಾಯ ಮಾಡುತ್ತದೆ. ಇದು ಯಾವುದೇ ಒಬ್ಬ ಕೆಲಸದವರಿಂದ ಕಷ್ಟ ಸಾಧ್ಯ.

ಈ ಹಿಂದೆಲ್ಲಾ ಹಸುಗಳಿಗೆ ಬರುತ್ತಿದ್ದ ಕಾಯಿಲೆಗಳನ್ನು ಗುರುತಿಸಿ ಚಿಕಿತ್ಸೆ ನೀಡುವುದಕ್ಕೆ ಸಾಕಷ್ಟು ಸಮಯ ಹಿಡಿಯುತ್ತಿತ್ತು. ಇಂತಹ ಸಮಯದಲ್ಲಿ ಹಸುಗಳು ಸಾವನ್ನಪ್ಪುವ ಸಾಧ್ಯತೆಗಳು ಹೆಚ್ಚಿದ್ದವು. ಆದರೆ ಇಂದು ಈ ತಂತ್ರಜ್ಞಾನದಿಂದ ಪಶು ವೈದ್ಯರು ಅತಿ ಸುಲಭವಾಗಿ ಇವುಗಳಿಗೆ ಬಾಧಿಸಿರುವ ಕಾಯಿಲೆಯನ್ನು ಪತ್ತೆ ಹಚ್ಚಿ ಚಿಕಿತ್ಸೆಯನ್ನು ನೀಡಬಹುದಾಗಿದೆ. ಹೀಗೆ ಈ ತಂತ್ರಜ್ಞಾನದ ಕೊಡುಗೆಯಿಂದ ಇವುಗಳ ಆರೋಗ್ಯ ಸುಧಾರಿಸಿರುವುದಷ್ಟೇ ಅಲ್ಲದೆ ಇವುಗಳು ಹಾಲಿನ ಹೊಳೆಯನ್ನೇ ಹರಿಸುತ್ತಿವೆ. ಒಂದರ್ಥದಲ್ಲಿ ಎರಡು ದಶಮಾನಗಳ ಹಿಂದಿನ ಎಲ್ಲಾ ದಾಖಲೆಗಳನ್ನು ಈ ತಂತ್ರಜ್ಞಾನ ಮುರಿದು ಹಾಕಿದೆಯಂತೆ. ಉದಾಹರಣೆಗೆ ಅಮೇರಿಕಾದ ಕೊಲಾರ್ಯಾಡೋದಲ್ಲಿ 1996ರಲ್ಲಿ ಹಸುಗಳು ನೀಡುತ್ತಿದ್ದ ಹಾಲಿನ ಸರಾಸರಿ ಪ್ರಮಾಣದ ಎರಡರಷ್ಟು ಇಳುವರಿಯನ್ನು ಇಂದು ಅಲ್ಲಿನ ಡೇರಿ ಹಸುಗಳು ನೀಡುತ್ತಿವೆಯಂತೆ. ಇನ್ನು ಸಮಯಕ್ಕೆ ಸರಿಯಾಗಿ ಸ್ವಚ್ಛತೆ ಆಗದಿದ್ದಲ್ಲಿ ಅದನ್ನು ಸಹ ಗಮನಕ್ಕೆ ತರುವ ಕೆಲಸವನ್ನು ಇದು ಮಾಡುತ್ತದೆ. ಒಟ್ಟಾರೆಯಾಗಿ ಈ ತಂತ್ರಜ್ಞಾನವನ್ನು ಅಳವಡಿಸಿಕೊಂಡ ಎಲ್ಲಾ ಡೇರಿ ಫಾರ್ಮ್‌ಗಳು ಈ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳದ ಉಳಿದೆಲ್ಲಾ ಡೇರಿ ಫಾರ್ಮ್‌ಗಳಿಗಿಂತ ಹೆಚ್ಚಿನ ಲಾಭವನ್ನು ಗಳಿಸುತ್ತಿರುವುದಂತೂ ಸತ್ಯ.

08-02-2022
Hd Pg 07

ಕೈಸುಡುತ್ತಿರುವ ಅಡುಗೆ ಎಣ್ಣೆ

ಯುದ್ಧದ ಪರಿಣಾಮ: ಸೂರ್ಯಕಾಂತಿ ಎಣ್ಣೆ ಬೆಲೆ ₹175ರವರೆಗೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಷ್ಯಾ ಮತ್ತು ಉಕ್ರೇನ್ ನಡುವೆ ಯುದ್ಧ ಆರಂಭವಾದ ನಂತರ ಸೂರ್ಯಕಾಂತಿ ಎಣ್ಣೆಯ ಆಮದಿನ ಮೇಲೆ ಏಟು ಬಿದ್ದಿದೆ. ಇದರ ಪರಿಣಾಮ ಸೂರ್ಯಕಾಂತಿ ಎಣ್ಣೆಯ ಬೆಲೆಯು ಕೆಲವೇ ದಿನಗಳ ಅವಧಿಯಲ್ಲಿ ಲೀಟರ್‌ಗೆ ₹40ರಷ್ಟು ಏರಿಕೆಯಾಗಿದೆ. ರಾಜ್ಯದ ಹಲವೆಡೆ ಸೂಪರ್ ಮಾರ್ಕೆಟ್‌ಗಳಲ್ಲಿ ಗ್ರಾಹಕರಿಗೆ ಅಡುಗೆ ಎಣ್ಣೆ ಖರೀದಿ ಮೇಲೆಯೂ ಮಿತಿ ಹೇರಲಾಗಿದೆ.

'ಯುದ್ಧ ನಿಲ್ಲದ ಹೊರತು ಮಾರುಕಟ್ಟೆಯಲ್ಲಿ ಸೂರ್ಯಕಾಂತಿ ಎಣ್ಣೆಯ ಪೂರೈಕೆ ಸಹಜ ಸ್ಥಿತಿಗೆ ಬರುವುದು ಕಷ್ಟ' ಎಂದು ಮಾರುಕಟ್ಟೆ ತಜ್ಞರು ಅಂದಾಜು ಮಾಡಿದ್ದಾರೆ.

'ಭಾರತವು ವರ್ಷಕ್ಕೆ ಸರಿಸುಮಾರು 25 ಲಕ್ಷ ಟನ್ ಸೂರ್ಯಕಾಂತಿ ಎಣ್ಣೆಯನ್ನು ಆಮದು ಮಾಡಿಕೊಳ್ಳುತ್ತಿದೆ. ಇದರಲ್ಲಿ ಶೇಕಡ 80ರಷ್ಟು ಪಾಲು ಉಕ್ರೇನ್‌ನಿಂದ ಬರುತ್ತಿದೆ. ಇನ್ನುಳಿದ ಪಾಲು ರಷ್ಯಾ ಮತ್ತು ಅರ್ಜೆಂಟೀನಾ ದೇಶಗಳಿಂದ ಆಮದು ಆಗುತ್ತಿದೆ.



ಬೆಂಗಳೂರಿನ ಕತ್ರಿಗುಪ್ಪೆಯ ಮಳಿಗೆಯೊಂದರಲ್ಲಿ ಅಡುಗೆ ಎಣ್ಣೆ ಖರೀದಿ ಮಿತಿಯ ಬಗ್ಗೆ ಮಾಹಿತಿ ಹಾಕಿರುವುದು –ಪ್ರಜಾವಾಣಿ ಚಿತ್ರ

ಫೆಬ್ರುವರಿ ಕೊನೆಯ ವಾರದಲ್ಲಿ ಯುದ್ಧ ಶುರುವಾದ ನಂತರ ಅಲ್ಲಿಂದ ಸೂರ್ಯಕಾಂತಿ ಎಣ್ಣೆ ಪೂರೈಕೆ ಆಗುವುದು ನಿಂತಿದೆ. ಅದು ಈಗಿನ ಪರಿಸ್ಥಿತಿಗೆ ಕಾರಣ' ಎಂದು ಕರ್ನಾಟಕ ಸಹಕಾರ ಎಣ್ಣೆಬೀಜ ಬೆಳೆಗಾರರ ಮಹಾಮಂಡಳದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'ಅಡುಗೆ ಎಣ್ಣೆ ಆಮದಿಗೆ ಮೊದಲೇ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಆದರೆ, ಯುದ್ಧ ಶುರುವಾದ ನಂತರ ಆ ಒಪ್ಪಂದಕ್ಕೆ ಅನುಗುಣವಾಗಿ ಅಡುಗೆ ಎಣ್ಣೆ ಬರುತ್ತಿಲ್ಲ. ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧವು ತಕ್ಷಣಕ್ಕೆ ಕೊನೆಗೊಂಡರೂ, ಉಕ್ರೇನ್‌ನಿಂದ ಇಲ್ಲಿಗೆ ಸೂರ್ಯಕಾಂತಿ ಎಣ್ಣೆ ಬರಲು 40 ರಿಂದ 45 ದಿನಗಳು ಬೇಕಾಗುತ್ತದೆ' ಎಂದು ಮೂಲಗಳು ಅಂದಾಜಿಸಿವೆ.

ಕರ್ನಾಟಕದಲ್ಲಿ ವಾರ್ಷಿಕ ಸರಿಸುಮಾರು ಮೂರು ಲಕ್ಷ ಟನ್ ಸೂರ್ಯಕಾಂತಿ ಎಣ್ಣೆ ಬಳಕೆ ಇದೆ. ಯುದ್ಧ ಶುರುವಾದ ನಂತರ ಉಕ್ರೇನ್‌ನ ಎಣ್ಣೆ ಗಿರಣಿಗಳು ಕೆಲಸ ನಿಲ್ಲಿಸಿವೆ ಎಂಬ ಮಾಹಿತಿ ಇದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

10ನೇ ಪುಟ ನೋಡಿ

ಸಂಘರ್ಷ ಮುಂದುವರಿದರೆ ಮತ್ತಷ್ಟು ದುಬಾರಿ

ಬೆಂಗಳೂರು: ರಷ್ಯಾ ಮತ್ತು ಉಕ್ರೇನ್ ನಡುವಿನ ಸಂಘರ್ಷವು ಇದೇ ರೀತಿ ಮುಂದುವರಿದಲ್ಲಿ ಸೂರ್ಯಕಾಂತಿ ಎಣ್ಣೆ ದರವು ಲೀಟರಿಗೆ ₹ 195ರಿಂದ ₹ 200ರವರೆಗೂ ಏರಿಕೆ ಆಗುವ ಎಲ್ಲ ಸಾಧ್ಯತೆಗಳು ಇವೆ ಎಂದು ವರ್ತಕರು ಹೇಳಿದ್ದಾರೆ.

ಸೂರ್ಯಕಾಂತಿ ಎಣ್ಣೆ ದರವು ಸಗಟು ಮಾರುಕಟ್ಟೆಯಲ್ಲಿ ಲೀಟರಿಗೆ ಈಗಾಗಲೇ ₹ 40ರಷ್ಟು ಏರಿಕೆ ಆಗಿದೆ. ಈ ಏರಿಕೆಯು ಚಿಲ್ಲರೆ ಮಾರಾಟ ದರಕ್ಕೆ ವರ್ಗಾವಣೆ ಆಗಿಲ್ಲ. ಮಾರುಕಟ್ಟೆಯಲ್ಲಿ ಸದ್ಯ ಹಳೆಯ 'ಎಂಆರ್‌ಪಿ' ಇರುವ ದಾಸ್ತಾನು ಮಾರಾಟ ಆಗುತ್ತಿದೆ. ಶೀಘ್ರವೇ ಹೊಸ ಎಂಆರ್‌ಪಿ ಬರಲಿದ್ದು, ಆಗ ಬೆಲೆಯಲ್ಲಿ ಇನ್ನಷ್ಟು ಏರಿಕೆ ಆಗುವ ನಿರೀಕ್ಷೆ ಇದೆ ಎಂದು ಬೆಂಗಳೂರಿನ ಯಲಹಂಕದ ಅಡುಗೆ ಎಣ್ಣೆ ವ್ಯಾಪಾರಿ ಕೃಷ್ಣಂ ಶಶಿಧರ್ ತಿಳಿಸಿದರು.

10ನೇ ಪುಟ ನೋಡಿ
ಇನ್ನೊಂದು ಸುದ್ದಿ 10

08-02-2022
Pv Pg 01

ಬೆಂಗಳೂರು ಇಂಡಿಯಾ ನ್ಯಾನೊ ಸಮಾವೇಶವದಲ್ಲಿ ಸಿಎಂ ಆಶಯ

ನ್ಯಾನೋ ಯೂರಿಯಾ: ಕೃಷಿಕರ ಅವಿಭಾಜ್ಯ ಅಂಗ

ಬೆಂಗಳೂರು: ನ್ಯಾನೋ ಯೂರಿಯಾವನ್ನು ರಾಜ್ಯದ ಎಲ್ಲ ಕೃಷಿ ವಿವಿಗಳಲ್ಲಿ ಈಗಾಗಲೇ ಪರೀಕ್ಷೆಗೆ ಒಳಪಡಿಸಲಾಗಿದ್ದು, ಒಳ್ಳೆಯ ಫಲಿತಾಂಶ ಬಂದಿದೆ. ಇದು ಮುಂಬರುವ ದಿನಗಳಲ್ಲಿ ಕೃಷಿಕರ ಅವಿಭಾಜ್ಯ ಅಂಗವಾಗಲಿದ್ದು, ನ್ಯಾನೋ ತಂತ್ರಜ್ಞಾನವು ಬದುಕಿನಲ್ಲಿ ಮಹತ್ತರ ಬದಲಾವಣೆಗಳನ್ನು ತರಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ರಾಜ್ಯ ಸರ್ಕಾರ ಮತ್ತು ಕರ್ನಾಟಕ ವಿಷನ್ ಗ್ರೂಪ್ ವತಿಯಿಂದ ಸೋಮವಾರ ನಗರದಲ್ಲಿ ಆಯೋಜಿಸಿದ್ದ ಬೆಂಗಳೂರು ಇಂಡಿಯಾ ನ್ಯಾನೊ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿಜ್ಞಾನ ಮತ್ತು ತಂತ್ರಜ್ಞಾನಗಳ ಮೂಲಕ ಜನಜೀವನವನ್ನು ಸುಧಾರಿಸಬೇಕು. ಇದಕ್ಕಾಗಿ ನ್ಯಾನೋ ತಂತ್ರಜ್ಞಾನ ಮುಖ್ಯ ಪಾತ್ರವನ್ನು ಮುಂಬರುವ ದಿನಗಳಲ್ಲಿ ವಹಿಸಲಿದೆ. ಆದಕ್ಕಾಗಿ ನಾವು ನ್ಯಾನೋ ವಿಜ್ಞಾನದತ್ತ ಹೆಚ್ಚಿನ ಗಮನ ಹರಿಸಬೇಕು. ಇನ್ನು ಈಗಾಗಲೇ ಕೃಷಿ ಕ್ಷೇತ್ರದಲ್ಲಿ ನ್ಯಾನೋ ವಿಜ್ಞಾನ ಲಗ್ಗೆ ಇಟ್ಟಿದ್ದು, ಈ ತಂತ್ರಜ್ಞಾನದ ಮೂಲಕ ತಯಾರಿಸಿರುವ ನ್ಯಾನೋ ಯೂರಿಯಾ ರಸಗೊಬ್ಬರವು ಪರೀಕ್ಷಾ ಹಂತದಲ್ಲಿ ಯಶಸ್ವಿಯಾಗಿದೆ ಎಂದು ಹೇಳಿದರು.

ತಂತ್ರಜ್ಞಾನ ಮತ್ತು ಆಧ್ಯಾತ್ಮ ಒಂದು ನಾಣ್ಯದ ಎರಡು ಮುಖಗಳು: ತಂತ್ರಜ್ಞಾನ ಮತ್ತು ಆಧ್ಯಾತ್ಮ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಆಧ್ಯಾತ್ಮದ ಅರಿವಿನಿಂದ ತಂತ್ರಜ್ಞಾನದ ಕುರಿತು ಹೆಚ್ಚಿನ ಸಾಧನೆಯನ್ನು ಮಾಡಲು ಸಾಧ್ಯ. ಹೊಸ ಆವಿಷ್ಕಾರಗಳು ಅನೇಕ ದೃಷ್ಟಿ ಕೋನಗಳನ್ನು ಸೃಷ್ಟಿಸುತ್ತದೆ. ಆದರೆ ಅಂತಹ ಹೊಸ ವಿಷಯವನ್ನು ಕಂಡುಹಿಡಿಯಲು ಮನಸ್ಸು ಮತ್ತು ಬುದ್ಧಿ ಎರಡು ಶಾಂತವಾಗಿರಬೇಕು. ಅದು ಆಧ್ಯಾತ್ಮದಿಂದ ಸಾಧ್ಯ ಸಿಎಂ ಹೇಳಿದರು. ಶಾಸ್ತ್ರ ವೈಜ್ಞಾನಿಕ ಅಧ್ಯಯನ ಕೇಂದ್ರದ ಹಿರಿಯ ವಿಜ್ಞಾನಿ ಡಾ.ಎಸ್. ಸ್ವಾಮಿನಾಥನ್‌ಗೆ ಸಿಎನ್‌ಆರ್ ರಾವ್ ವಿಜ್ಞಾನ



ನ್ಯಾನೊ ತಂತ್ರಜ್ಞಾನ ನೀತಿ ಅಳವಡಿಕೆ

ಐಟಿ ಮತ್ತು ಬಿಟಿ ಸಚಿವ ಅಶ್ವತ್ಥ್ ನಾರಾಯಣ ಮಾತನಾಡಿ, ಪ್ರಸ್ತುತ ಜಗತ್ತಿನಲ್ಲಿ ಅತೀ ವೇಗವಾಗಿ ಬೆಳೆಯುತ್ತಿರುವ ವಿಷಯಗಳಲ್ಲಿ ಒಂದು ನ್ಯಾನೋ ವಿಜ್ಞಾನ. ಆದಕ್ಕಾಗಿ ನ್ಯಾನೋ ತಂತ್ರಜ್ಞಾನ ನೀತಿಯನ್ನು ಜಾರಿಗೆ ತರಲಾಗುವುದು. ಈ ಮೂಲಕ ಸಂಶೋಧನಾ ಮತ್ತು ಔದ್ಯಮಿಕ ವಲಯಗಳೆರಡನ್ನೂ ಪರಸ್ಪರ ಹತ್ತಿರಕ್ಕೆ ತರಲಾಗುವುದು. ಇದರಿಂದಾಗಿ, ನ್ಯಾನೋ ತಂತ್ರಜ್ಞಾನದ ಲಾಭವು ಸಮಾಜಕ್ಕೆ ಸಿಗಲಿದೆ ಎಂದರು. ನ್ಯಾನೋ ತಂತ್ರಜ್ಞಾನವನ್ನು ಪ್ರೋತ್ಸಾಹಿಸಲು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ಇದರತ್ತ ಬರುವಂತೆ ಮನವಲಿಸಲು ವಿಜ್ಞಾನ ಪ್ರತಿಭಾ ಶೋಧ ವನ್ನು ಹಮ್ಮಿಕೊಳ್ಳಲಾಗಿದ್ದು, ಶಿಷ್ಯವೇತನಗಳನ್ನು ನೀಡಲಾಗುತ್ತದೆ. ಅಲ್ಲದೆ, ವಿಜ್ಞಾನಕ್ಕೆ ಸಂಬಂಧಪಟ್ಟಂತೆ ಪ್ರಾದೇಶಿಕ ಮತ್ತು ಉಪಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಎಂದು ಹೇಳಿದರು.

> ಭಾರತ ಪ್ರಸ್ತುತ ನ್ಯಾನೊ ಟೆಕ್ನಾಲಜಿ ಬೆಳವಣಿಗೆಯಲ್ಲಿ ಮುಂಚೂಣಿಯಲ್ಲಿದ್ದು, ಡಿಜಿಟಲ್ ಆರ್ಥಿಕತೆಯನ್ನು ಸದೃಢವಾಗಿ ಬೆಳೆಸಲು ಪೂರಕವಾಗಿದೆ. ಇನ್ನು ನಾಲ್ಕು ವರ್ಷಗಳು ವಿಶ್ವದ ಅತಿ ಹೆಚ್ಚು ನ್ಯಾನೊ ತಂತ್ರಜ್ಞಾನ ಅಳವಡಿಸಿದ ರಾಷ್ಟ್ರಗಳಲ್ಲಿ ಭಾರತವೂ ಒಂದಾಗಲಿದೆ.
>
> ■ ರಾಜೀವ್ ಚಂದ್ರಶೇಖರ್, ಕೇಂದ್ರ ಸಚಿವ

ಪ್ರಶಸ್ತಿ ಪ್ರದಾನಿಸಲಾಯಿತು. ವಿ ಜಿ ಎಂ ಟಿ ಅಧ್ಯಕ್ಷ ಪ್ರೊ. ನಾವಕಾಂತ್ ಭಟ್, ಸಮಿತಿ ಮುಖ್ಯಸ್ಥ ಪ್ರೊ. ಅಜಯಕುಮಾರ್ ಸೂದ್, ವಿಜ್ಞಾನಮತ್ತು ತಂತ್ರಜ್ಞಾನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ.ರಮಣ ರೆಡ್ಡಿ, ಕೆಸ್ಟ್ಸ್ ವ್ಯವಸ್ಥಾಪಕ ನಿರ್ದೇಶಕ ಎ.ಬಿ.ಬಸವರಾಜು ಉಪಸ್ಥಿತರಿದ್ದರು. ಭಾರತ ರತ್ನ ಡಾ.ಸಿಎನ್‌ಆರ್ ರಾವ್ ವರ್ಚುಯಲ್ ಮೂಲಕ ಭಾಗವಹಿಸಿದ್ದರು.

08-02-2022
Hd Pg 05

ಸಂಪಾದಕೀಯ

ಜಗತ್ತಿನ ನೆರವಿಗೆ ಭಾರತದ ಗೋಧಿ

ರಷ್ಯಾ ಮತ್ತು ಉಕ್ರೇನ್ ನಡುವಿನ ಸಮರದ ಮಧ್ಯೆಯೇ ಭಾರತದ ಪಾಲಿಗೆ ಸಂತೋಷಕರ ಸುದ್ದಿಯೆಂದರೆ ಭಾರತದಲ್ಲಿ ಗೋಧಿ ಉತ್ಪಾದನೆಯು ಈ ಬಾರಿ ದಾಖಲೆ ಪ್ರಮಾಣದಲ್ಲಾಗಿರುವುದು. ಇದು ಭಾರತವು ಗೋಧಿ ರಫ್ತನ್ನು ಹೆಚ್ಚಿಸಲು ಮತ್ತು ಗೋಧಿ ಪೂರೈಕೆಯ ಅಭಾವದಿಂದ ಬಳಲುತ್ತಿರುವ ಜಗತ್ತಿಗೆ ನೆರವಾಗಲೂ ಅವಕಾಶ ಕಲ್ಪಿಸಿದೆ. ರಷ್ಯಾ -ಉಕ್ರೇನ್ ನಡುವಿನ ಸಮರದ ಫಲವಾಗಿ ಜಗತ್ತಿನಲ್ಲಿ ಗೋಧಿ ಪೂರೈಕೆಯಲ್ಲಿ ಅಭಾವವುಂಟಾಗಿದ್ದು, ವಿಶ್ವವು ಭಾರತದಿಂದ ಗೋಧಿ ಪೂರೈಕೆಯನ್ನು ಎದುರು ನೋಡುತ್ತಿದೆ.

ಜೋಳದ ಬಳಿಕ ಜಗತ್ತಿನಲ್ಲಿ ಅತಿಯಾಗಿ ಬಳಸಲ್ಪಡುತ್ತಿರುವ ಧಾನ್ಯವು ಗೋಧಿಯೇ ಆಗಿದೆ. ಗೋಧಿ ಉತ್ಪಾದನೆಯಲ್ಲಿ ಚೀನಾ ಮತ್ತು ಭಾರತಗಳು ಅಗ್ರಸ್ಥಾನದಲ್ಲಿದ್ದರೂ, ಜಗತ್ತಿಗೆ ಗೋಧಿ ಪೂರೈಸುವಲ್ಲಿ ರಷ್ಯಾ ಮತ್ತು ಉಕ್ರೇನ್‌ಗಳು ಅಗ್ರಸ್ಥಾನದಲ್ಲಿವೆ. ಇವೆರಡು ದೇಶಗಳು ಜಗತ್ತಿನ ಗೋಧಿ ಪೂರೈಕೆಯ ಶೇ.30ರಷ್ಟನ್ನು ಪೂರೈಸುತ್ತವೆ. ಈಜಿಪ್ಟ್, ಟರ್ಕಿ, ಬಾಂಗ್ಲಾ ಮೊದಲಾದ ದೇಶಗಳಂತೂ ಇವೆರಡು ದೇಶಗಳಿಂದ ಅಧಿಕ ಪ್ರಮಾಣದಲ್ಲಿ ಗೋಧಿ ಆಮದು ಮಾಡುತ್ತವೆ. ಉಕ್ರೇನ್ ಮೇಲೆ ರಷ್ಯಾ ಸಾರಿರುವ ಸಮರದ ಕಾರಣದಿಂದಾಗಿ ಜಗತ್ತಿಗೆ ಇವೆರಡು ದೇಶಗಳ ಗೋಧಿ ಪೂರೈಕೆ ಸ್ಥಗಿತಗೊಂಡಿದೆ. ಹಾಗಾಗಿ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಗೋಧಿಯ ಅಭಾವವುಂಟಾಗಿದ್ದು, ಗೋಧಿ ಬೆಲೆಯಲ್ಲೂ ಏರಿಕೆಯಾಗಿದೆ. ಇದೇ ಸಂದರ್ಭದಲ್ಲಿ ಭಾರತದಲ್ಲಿ ಗೋಧಿ ದಾಖಲೆ ಪ್ರಮಾಣದಲ್ಲಿ ಉತ್ಪಾದನೆಯಾಗಿದ್ದು, ಜಗತ್ತಿಗೆ



ಗೋಧಿ ಪೂರೈಸಲು ಮುಂದಾಗಿದೆ. ಕಳೆದ ವರ್ಷ ಭಾರತದಲ್ಲಿ 109.59 ಮಿಲಿಯ ಟನ್ ಗೋಧಿ ಉತ್ಪಾದನೆಯಾಗಿದ್ದರೆ, ಈ ವರ್ಷ 111.32 ಮಿಲಿಯ ಟನ್ ಗೋಧಿ ಉತ್ಪಾದನೆಯಾಗುವ ನಿರೀಕ್ಷೆಯಿದೆ. ಈಗಾಗಲೆ ಭಾರತವು 6.6 ಮಿಲಿಯ ಟನ್‌ನಷ್ಟು ಗೋಧಿಯನ್ನು ರಫ್ತು ಮಾಡಿದ್ದು, ಈ ತಿಂಗಳಲ್ಲಿ ಗೋಧಿ ಕಟಾವಿನ ಬಳಿಕ ಇನ್ನಷ್ಟು ಗೋಧಿ ರಫ್ತಿಗೆ ಭಾರತವು ಸಜ್ಜಾಗಿದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಗೋಧಿ ಕಟಾವಿಗೆ ಇನ್ನೂ ಕೆಲವು ತಿಂಗಳುಗಳಿರುವುದರಿಂದ ಈಗಾಗಲೆ ಹಲವಾರು ದೇಶಗಳು ಭಾರತದ ಗೋಧಿಗೆ ಬೇಡಿಕೆಯಿಟ್ಟಿವೆ. ಇದು ಭಾರತದ ಗೋಧಿ ಬೆಳೆಯುವ ಕೃಷಿಕರಿಗೂ ವರದಾನವಾಗಿದೆ.

ಇದಷ್ಟೇ ಅಲ್ಲದೆ, ಭಾರತವು ಮಾನವೀಯ ನೆಲೆಯಲ್ಲಿ ಕೂಡ ಕೆಲವು ಬಡರಾಷ್ಟ್ರಗಳಿಗೆ ಗೋಧಿಯನ್ನು ಪೂರೈಸುತ್ತಿದೆ. ಈಗಾಗಲೆ ಅಫಘಾನಿಸ್ತಾನಕ್ಕೆ ಮಾನವೀಯ ನೆಲೆಯಲ್ಲಿ 4000 ಟನ್ ಗೋಧಿ ಪೂರೈಸಿದ್ದು ಇನ್ನೂ 50,000 ಟನ್ ಹೆಚ್ಚುವರಿ ಗೋಧಿ ಪೂರೈಸಲು ಸಜ್ಜಾಗಿದೆ. ಭಾರತದ ಗೋಧಿಯು ಉತ್ಕೃಷ್ಟ ಗುಣಮಟ್ಟದ್ದಾಗಿದೆ ಎಂದು ಅಫಘಾನಿಸ್ತಾನದ ಸರಕಾರವು ಭಾರತಕ್ಕೆ ಕೃತಜ್ಞತೆ ಸಲ್ಲಿಸಿದ್ದು, ಪಾಕಿಸ್ತಾನವು ಕಳಿಸಿದ ಗೋಧಿ ಅತ್ಯಂತ ಕಳಪೆ ಗುಣಮಟ್ಟದ್ದಾಗಿದ್ದು, ಮನುಷ್ಯರು ಸೇವಿಸುವ ಸ್ಥಿತಿಯಲ್ಲಿರಲಿಲ್ಲ ಎಂಬುದಾಗಿ ಹೇಳಿದೆ. ಮೊದಲೆಲ್ಲ ಸಂಕಟ ಕಾಲದಲ್ಲಿ ಜಾಗತಿಕ ನೆರವು ಕೇಳುತಿದ್ದ ಭಾರತವು ಈಗ ಜಗತ್ತಿನ ಸಂಕಟ ಕಾಲದಲ್ಲಿ ತಾನೇ ನೆರವೀಯುವ ಹಂತಕ್ಕೆ ತಲುಪಿದೆ!

08-02-2022
Hd Pg 06